# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು – 572 103

ದಿನಾಂಕ:23.11.2020

ಸಂಖ್ಯೆ: ತುವಿ:ಶೈ.ವಿ:2020-21:-8717

## ಅಧಿಸೂಚನೆ

ವಿಷಯ : 2020-21ನೇ ಶೈಕ್ಷಣಿಕ ಸಾಲಿನ ಸ್ನಾತಕ ದೈಹಿಕ ಶಿಕ್ಷಣ ಪದವಿಯ ಶೈಕ್ಷಣಿಕ ವೇಳಾಪಟ್ಟಿ ಕುರಿತು.

ಉಲ್ಲೇಖ : 1) ಶೈಕ್ಷಣಿಕ ವೇಳಾಪಟ್ಟಿ ಸಮಿತಿ ಸಭೆಯ ದಿನಾಂಕ: 21.11.2020

2) ಮಾನ್ಯ ಕುಲಪತಿಗಳ ಅನುಮೋದನೆ (ಕಂಡಿಕೆ 146) ದಿನಾಂಕ 21.11.2020.

* * * * *

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, 2020-21ನೇ ಶೈಕ್ಷಣಿಕ ಸಾಲಿನ ಸ್ನಾತಕ ದೈಹಿಕ ಶಿಕ್ಷಣ ಪದವಿಯ ಶೈಕ್ಷಣಿಕ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ನಿಗಧಿಪಡಿಸಲಾಗಿದೆ.

ಸ್ನಾತಕ ದೈಹಿಕ ಶಿಕ್ಷಣ ಪದವಿಯ 2020-21 ನೇ ಶೈಕ್ಷಣಿಕ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯು ಈ ಕೆಳಕಂಡಂತಿದೆ.

### I, III ನೇ ಸೆಮಿಸ್ಟರ್

| ಕ್ರಮ ಸಂಖ್ಯೆ | ಶೈಕ್ಷಣಿಕ ವೇಳಾಪಟ್ಟಿ | ದಿನಾಂಕ |
|---|---|---|
| 1 | ಕಾಲೇಜಿನ ಪುನರಾರಂಭ ಮತ್ತು ಅಧ್ಯಾಪಕರುಗಳು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದು | 17.11.2020 |
| 2 | I & III ನೇ ಸೆಮಿಸ್ಟರ್ ತರಗತಿಗಳ ಪ್ರಾರಂಭ | 30.11.2020 |
| 3 | ದಂಡಶುಲ್ಕವಿಲ್ಲದೆ ಪ್ರವೇಶಾತಿ ಕೊನೆಯ ದಿನಾಂಕ | 01.12.2020 |
| 4 | ದಂಡ ಶುಲ್ಕ ರೂ 1000/-ದೊಂದಿಗೆ ಪ್ರವೇಶಾತಿ ಕೊನೆಯ ದಿನಾಂಕ | - |
| 5 | ಪ್ರವೇಶಾತಿ ತಃಖ್ತೆಯನ್ನು ತ್ರಿಪ್ರತಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕಾದ ಕೊನೆಯ ದಿನಾಂಕ | 10.12.2020 |
| 6 | I & III ನೇ ಸೆಮಿಸ್ಟರ್ ತರಗತಿಗಳ ಮುಕ್ತಾಯ | 25.03.2021 |
| 7 | ರಜಾ ದಿನ | 26.03.2021 ರಿಂದ 01.04.2021 |
| 8 | ಪ್ರಾಯೋಗಿಕ ಪರೀಕ್ಷೆಗಳು | 05.04.2021 ರಿಂದ 08.04.2021 |
| 9 | I & III ನೇ ಸೆಮಿಸ್ಟರ್ ಸೈದ್ಧಾಂತಿಕ ಪರೀಕ್ಷೆಗಳ ಪ್ರಾರಂಭ | 15.04.2021 |

### II, IV ನೇ ಸೆಮಿಸ್ಟರ್

| ಕ್ರ.ಸ | ಶೈಕ್ಷಣಿಕ ವೇಳಾಪಟ್ಟಿ | ದಿನಾಂಕ |
|---|---|---|
| 1 | II & IV ಸೆಮಿಸ್ಟರ್ ತರಗತಿಗಳ ಪುನರಾರಂಭ ದಿನಾಂಕ | 22.04.2021 |
| 2 | II & IV ನೇ ಸೆಮಿಸ್ಟರ್ ತರಗತಿಗಳ ಮುಕ್ತಾಯ | 18.08.2021 |
| 3 | ರಜಾ ದಿನ | 19.08.2021 ರಿಂದ 25.08.2021 |
| 4 | ಪ್ರಾಯೋಗಿಕ ಪರೀಕ್ಷೆಗಳು | 26.08.2021 ರಿಂದ 28.08.2021 |
| 5 | II & IV ನೇ ಸೆಮಿಸ್ಟರ್ ಸೈದ್ಧಾಂತಿಕ ಪರೀಕ್ಷೆಗಳ ಪ್ರಾರಂಭ | 31.08.2021 ರಿಂದ 04.09.2021 |

(ಪು.ತಿ.ನೋ)

## ಸೂಚನೆಗಳು

1. ವಿಶ್ವವಿದ್ಯಾನಿಲಯದಿಂದ ಸಂಯೋಜನೆ ಪಡೆಯದ ಯಾವುದೇ ಕಾಲೇಜು ವಿದ್ಯಾರ್ಥಿಗಳನ್ನು ಕೋರ್ಸು/ ವಿಷಯಗಳಿಗೆ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದಲ್ಲ ಮತ್ತು ಪಠ್ಯಕ್ರಮ ಹಾಗೂ ವಿನಿಯಮ ಅನುಮೋದನೆಗೊಳ್ಳದ ಕೋರ್ಸು/ ವಿಷಯಗಳಿಗೆ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದಲ್ಲ.

2. ವಿದ್ಯಾರ್ಥಿಗಳ ಪ್ರವೇಶಾತಿಯನ್ನು ವಿನಿಯಮಕ್ಕನುಗುಣವಾಗಿ ಹಾಗೂ ವಿಶ್ವವಿದ್ಯಾನಿಲಯವು ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗಳನ್ವಯ ಮಾಡಿಕೊಳ್ಳುವುದು, ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರು ಅಥವಾ ಸಂಸ್ಥೆಯ ಮುಖ್ಯಸ್ಥರ ಪೂರ್ಣ ಜವಾಬ್ದಾರಿಯಾಗಿರುತ್ತದೆ ಮತ್ತು ನಿಯಮಗಳಿಗೆ ವಿರುದ್ದವಾಗಿ ಮಾಡಿಕೊಳ್ಳಲಾಗುವ ಪ್ರವೇಶಾತಿಯು ಅಮಾನ್ಯವಾಗಿರುತ್ತದೆ.

3. ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜಿನಲ್ಲಿ ಹೊರ ರಾಜ್ಯದ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುವಾಗ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರು, ಸದರಿ ವಿದ್ಯಾರ್ಥಿಯು 10+02 ಅಥವಾ ತತ್ಸಮಾನ ಪರೀಕ್ಷೆ ಹಾಗೂ ಸ್ನಾತಕ ಪದವಿಯನ್ನು COBSE/AIU ನಿಂದ ಮಾನ್ಯತೆ ಪಡೆದಿರುವ ಮಂಡಳಿಯಿಂದ ಪಡೆದುಕೊಂಡಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು ಹಾಗೂ ನಿಗದಿತ ಶುಲ್ಕ ಪಾವತಿಸಿ ಅರ್ಹತಾ ಪ್ರಮಾಣ ಪತ್ರ ಪಡೆದ ನಂತರವೇ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದು. ಒಂದು ವೇಳೆ ಅರ್ಹತಾ ಪ್ರಮಾಣ ಪತ್ರ ಪಡೆಯದ ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡಿಕೊಂಡಲ್ಲಿ ಅಂತಹ ವಿದ್ಯಾರ್ಥಿಗಳ ಪ್ರವೇಶಾನುಮೋದನೆಯನ್ನು ನೀಡಲಾಗುವುದಿಲ್ಲ.

   ಹೊರ ದೇಶಗಳ ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡಿಕೊಳ್ಳುವಾಗ ಈ ಕೆಳಕಂಡ ದಾಖಲಾತಿಗಳನ್ನು ಪಡೆಯತಕ್ಕದ್ದು.

   ಎ. ಅರ್ಹತಾ ಪ್ರಮಾಣ ಪತ್ರ

   ಬಿ. ವಿದ್ಯಾರ್ಥಿಯ ವೀಸಾ

   ಸಿ. ಸಕ್ಷಮ ಪಾಧಿಕಾರವು ನೀಡಿರುವ A.I.D.S. ಮುಕ್ತ ಪ್ರಮಾಣ ಪತ್ರ

4. (ಎ) ಅನ್ಯ ವಿಶ್ವವಿದ್ಯಾನಿಲಯಗಳಲ್ಲಿ ಪದವಿ ಪೂರೈಸಿರುವ ವಿದ್ಯಾರ್ಥಿಗಳು ಪ್ರವೇಶಾತಿ ಸಂದರ್ಭಗಳಲ್ಲಿ ವಲಸೆ ಪ್ರಮಾಣ ಪತ್ರ ಒದಗಿಸಬೇಕು.

   (ಬಿ) ಬಿ.ಪಿ.ಇಡಿ., ಕೋರ್ಸಿನ ಅರ್ಹತಾ ಮಾನದಂಡವನ್ನು ಪೂರೈಸದ ಯಾವುದೇ ವಿದ್ಯಾರ್ಥಿಯು ಬಿ.ಪಿ.ಇಡಿ., ಕೋರ್ಸಿಗೆ ಪ್ರವೇಶ ಪಡೆಯಲು ಅರ್ಹತೆ ಹೊಂದಿರುವುದಿಲ್ಲ.

5. ವಿಶ್ವವಿದ್ಯಾನಿಲಯ/ರಾಜ್ಯ ಸರ್ಕಾರವು ನಿಗದಿಪಡಿಸಿರುವ ಪ್ರವೇಶಮಿತಿಗಿಂತ ಹೆಚ್ಚಾಗಿ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದಲ್ಲ. ಒಂದು ವೇಳೆ ಮಾಡಿಕೊಂಡಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 59(18) ರನ್ವಯ ಅಂತಹ ಪ್ರವೇಶಾತಿಯು ಅಮಾನ್ಯವಾಗುತ್ತದೆ.

6. ವಿದ್ಯಾರ್ಥಿಯು ಪ್ರವೇಶ ಪಡೆದಿರುವ ಕೋರ್ಸಿಗೆ ಸಂಬಂಧಿಸಿದ ವಿನಿಯಮ, ಕನಿಷ್ಠ ಹಾಜರಾತಿ ಮತ್ತು ಪರೀಕ್ಷಾ ಸ್ವರೂಪವನ್ನು ಪ್ರತಿ ವರ್ಷ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುವ ಸಂದರ್ಭದಲ್ಲಿ ವಿದ್ಯಾರ್ಥಿಗಳ ಗಮನಕ್ಕೆ ತರುವುದು ಹಾಗೂ ಅನುಸರಣಾ ವರದಿಯನ್ನು ಪ್ರವೇಶ ಪಟ್ಟಿಯೊಂದಿಗೆ ಸಲ್ಲಿಸುವುದು

(ಪು.ತಿ.ನೋ)

7. ಕಾಲೇಜುಗಳು ಆಯಾ ವರ್ಷಗಳಲ್ಲಿ ನಿಗದಿಪಡಿಸುವ ಕೊನೆಯ ದಿನಾಂಕದೊಳಗೆ ಎಲ್ಲಾ ಪ್ರವೇಶಾತಿಗಳನ್ನು ಮಾಡಿಕೊಳ್ಳತಕ್ಕದ್ದು. ಯಾವುದೇ ಕಾರಣಕ್ಕೂ ವಿಶ್ವವಿದ್ಯಾನಿಲಯವು ನಿಗದಿ ಪಡಿಸಿದ ಕೊನೆಯ ದಿನಾಂಕದ ನಂತರ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದಲ್ಲ. ಒಂದು ವೇಳೆ ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಪ್ರವೇಶಾತಿ ಮಾಡಿಕೊಂಡಲ್ಲಿ ಅಂತಹ ಪ್ರವೇಶಾತಿಯು ಅಮಾನ್ಯವಾಗುತ್ತದೆ.

8. ಪ್ರಾಂಶುಪಾಲರು/ಸಂಸ್ಥೆಯ ಮುಖ್ಯಸ್ಥರು ಪ್ರವೇಶಾತಿ ಪಟ್ಟಿಯನ್ನು ಶುಲ್ಕ ಪಾವತಿ ರಶೀದಿಯೊಂದಿಗೆ ತ್ರಿಪ್ರತಿಗಳಲ್ಲಿ ದಿನಾಂಕ 10.12.2020ರೊಳಗೆ ಮಾನ್ಯ ಕುಲಸಚಿವರು (ದ್ವಿಪ್ರತಿ) ಹಾಗೂ ಹಣಕಾಸು ಅಧಿಕಾರಿಗಳು (ಒಂದು ಪ್ರತಿ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರಿಗೆ ಸಲ್ಲಿಸುವುದು. ಕಾಲೇಜಿನ ಅಧಿಕಾರಿಗಳು, ಶೈಕ್ಷಣಿಕ ವಿಭಾಗಕ್ಕೆ ನಿಗದಿತ ದಿನಾಂಕದಂದು ಎಲ್ಲಾ ಅವಶ್ಯ ದಾಖಲಾತಿಗಳನ್ನು ಒದಗಿಸುವುದು. ಪ್ರಾಂಶುಪಾಲರು/ಸಂಸ್ಥೆಯ ಮುಖ್ಯಸ್ಥರು ಪ್ರವೇಶಾತಿ ಪಟ್ಟಿಯನ್ನು ಸಲ್ಲಿಸುವ ಸಂದರ್ಭದಲ್ಲಿ ಎಲ್ಲಾ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ವಿಶ್ವವಿದ್ಯಾನಿಲಯದ ವಿನಿಯಮಗಳಿಗನುಗುಣವಾಗಿ ಮಾಡಿಕೊಳ್ಳಲಾಗಿದೆ ಎಂದು ದೃಢೀಕರಿಸುವುದು ಹಾಗೂ ಅನುಸರಣಾ ವರದಿಯನ್ನು ಅಧಿಸೂಚನೆಯ ಪ್ರಕರಣ 06ರನ್ವಯ ಸಲ್ಲಿಸುವುದು.

9. ಶೈಕ್ಷಣಿಕ ವೇಳಾಪಟ್ಟಿಯನ್ನು ಎಲ್ಲಾ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಗಮನಕ್ಕೆ ತರುವುದು

10. ಶೈಕ್ಷಣಿಕ ವೇಳಾಪಟ್ಟಿಯಲ್ಲಿನ ಯಾವುದೇ ದಿನಾಂಕವು ರಜಾದಿನವೆಂದು ಘೋಷಿಸಲ್ಪಟ್ಟಲ್ಲಿ ಕಾರ್ಯಕ್ರಮಗಳು ಸದರಿ ದಿನಾಂಕದ ನಂತರದ ಕರ್ತವ್ಯದ ದಿನ ಪ್ರಾರಂಭಗೊಳ್ಳುತ್ತದೆ.

24/11

ಕುಲಸಚಿವರು
ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

**ಪ್ರಾಂಶುಪಾಲರು, ಶ್ರೀ ಸಿದ್ದಗಂಗಾ ದೈಹಿಕ ಶಿಕ್ಷಣ ಮಹಾವಿದ್ಯಾಲಯ, ಶ್ರೀ ಸಿದ್ದಗಂಗ ಮಠ,ಕ್ಯಾತ್ಸಂದ್ರ, ತುಮಕೂರು**

ಪ್ರತಿಗಳು:

1. ಕುಲಸಚಿವರು (ಮೌಲ್ಯಮಾಪನ) ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2. ಕುಲಸಚಿವರು, ಮೈಸೂರು/ಬೆಂಗಳೂರು/ಕರ್ನಾಟಕ/ಕುವೆಂಪು/ಮಂಗಳೂರು/ದಾವಣಗೆರೆ/ಕರ್ನಾಟಕ ಮಹಿಳಾ ವಿಶ್ವವಿದ್ಯಾನಿಲಯ
3. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
4. ಡೀನರು, ಕಲಾ ವಿಜ್ಞಾನ, ವಾಣಿಜ್ಯ ಮತ್ತು ಶಿಕ್ಷಣ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
5. ಗ್ರಂಥಪಾಲಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
6. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
7. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
8. ಎಲ್ಲಾ ವಿಭಾಗಗಳ ಉಪಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
9. ಮುಖ್ಯಸ್ಥರು, ಬಿ.ಎಫ್.ಎ. ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
10. ಎನ್.ಎಸ್.ಎಸ್. ಕೋ-ಆರ್ಡಿನೇಟರ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
11. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ವೆಬ್‌ಸೈಟ್‌ನಲ್ಲಿ ಇಂದೇ ಪ್ರಕಟಿಸುವುದು.
12. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
13. ಮಾನ್ಯ ಕುಲಸಚಿವರ ಆಪ್ತ ಸಹಾಯಕರು,
14. ಕಛೇರಿ ಪ್ರತಿ.